# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2531 |
| ಉತ್ತರಿಸಬೇಕಾದ ದಿನಾಂಕ | : | 23.03.2022 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಸಚಿವರು. |

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದ ಹಾಸನ ಜಿಲ್ಲೆಯಲ್ಲಿ ಗೋಸಂರಕ್ಷಣಾ ಕಾಯ್ದೆ ಜಾರಿಯಲ್ಲಿದೆಯೇ;</td><td>ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಅಧಿನಿಯಮ 2020 ರಾಜ್ಯದಲ್ಲಿ ಜಾರಿಯಲ್ಲಿರುತ್ತದೆ.</td></tr>
<tr><td>ಆ</td><td>ರೈತಾಪಿ ವರ್ಗದವರು ತಮ್ಮ ದನ–ಕರು, ಎತ್ತು– ಎಮ್ಮೆಗಳನ್ನು ಮಾರಾಟ/ಖರೀದಿ ಮಾಡುವಾಗ ಯಾವ ನಿಯಮಗಳನ್ನು ಅಳವಡಿಸಿಕೊಳ್ಳಬೇಕೆಂಬ ವಿಷಯವನ್ನು ಸಾರ್ವಜನಿಕರ ಅವಗಾಹನೆಗೆ ತರಲಾಗಿದೆ; (ಪೂರ್ಣ ವಿವರ ನೀಡುವುದು )</td><td>ರೈತಾಪಿ ವರ್ಗದವರು ತಮ್ಮ ದನ–ಕರು, ಎತ್ತು–ಎಮ್ಮೆಗಳನ್ನು ಮಾರಾಟ / ಖರೀದಿ ಮಾಡುವ ಕುರಿತು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಿಂದ ಯಾವುದೇ ನಿಯಮಗಳನ್ನು ರೂಪಿಸಿರುವುದಿಲ್ಲ.</td></tr>
<tr><td>ಇ</td><td>ಹಾಸನ ಜಿಲ್ಲೆಯಲ್ಲಿ ಎಷ್ಟು ಗೋ–ಶಾಲೆಗಳನ್ನು ತೆಗೆಯಲಾಗಿದೆ ಮತ್ತು ಇದರಿಂದ ರೈತರ ಅನುಕೂಲಕ್ಕಾಗಿ ಎಷ್ಟು ಹಣವನ್ನು ಸಂದಾಯ ಮಾಡಲಾಗಿದೆ; (ಪೂರ್ಣ ವಿವರ ನೀಡುವುದು)</td><td>ಹಾಸನ ಜಿಲ್ಲೆಯಲ್ಲಿ 2 ಖಾಸಗಿ ಗೋಶಾಲೆಗಳು ಇರುತ್ತವೆ. ಹಾಗೂ ಅವುಗಳಿಗೆ ಬಿಡುಗಡೆ ಮಾಡಲಾದ ಅನುದಾನದ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ ಸಂ.</th><th>ಗೋಶಾಲೆಯ ವಿವರ</th><th>2021–22ನೇ ಸಾಲಿನಲ್ಲಿ ಬಿಡುಗಡೆ ಮಾಡಲಾದ ಅನುದಾನ</th></tr>
<tr><td>1</td><td>ಭಗವಾನ್ ಮಹಾವೀರ್ ಗೋಶಾಲೆ, ಬಾಣಾವರ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ</td><td>ರೂ.4,47,200–00</td></tr>
<tr><td>2</td><td>ಕಸ್ತೂರ ಬಾ ಗೋಶಾಲೆ, ಅರಸೀಕೆರೆ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ</td><td>ರೂ.4,47,200–00</td></tr>
</table>
ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕು ಹಬ್ಬನಗಟ್ಟ ಕಾವಲು, ಬೋರನಕೊಪ್ಪಲು ಸ.ನ.2/70 ರಲ್ಲಿ 25 ಎಕರೆ ಪ್ರದೇಶದಲ್ಲಿ ಸರ್ಕಾರಿ ಗೋಶಾಲೆಯನ್ನು ಪ್ರಾರಂಭಿಸಲಾಗುತ್ತಿದೆ. ಇದಕ್ಕಾಗಿ ರೂ.53.50 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.</td></tr>
<tr><td>ಈ</td><td>ಹಾಸನ ಜಿಲ್ಲೆಯಲ್ಲಿ ಗೋ ಸಾಗಾಣಿಕೆ ಸಮಯದಲ್ಲಿ ಗೋಸಂರಕ್ಷಣಾ ಸಂಸ್ಥೆಯವರು ಅನಾವಶ್ಯಕವಾಗಿ ಪೊಲೀಸ್ ಠಾಣೆಗೆ ತಂದು ರೈತರಿಗೆ ತೊಂದರೆ ಕೊಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕಳೆದ 3 ವರ್ಷಗಳಲ್ಲಿ ಇಂತಹ ಎಷ್ಟು ಪ್ರಕರಣಗಳು ಹಾಸನ ಜಿಲ್ಲೆಯಲ್ಲಿ ನಡೆದಿದೆ?<br>(ವರ್ಷವಾರು ಪೂರ್ಣ ವಿವರ ನೀಡುವುದು)</td><td>ಕಳೆದ ಮೂರು ವರ್ಷಗಳಲ್ಲಿ ಹಾಸನ ಜಿಲ್ಲೆಯಲ್ಲಿ ಗೋ ಸಾಗಾಣಿಕೆ ಸಮಯದಲ್ಲಿ ಗೋ ಸಂರಕ್ಷಣಾ ಸಂಸ್ಥೆಯವರು ಅನಾವಶ್ಯಕವಾಗಿ ಪೊಲೀಸ್ ಠಾಣೆಗೆ ತಂದು ರೈತರಿಗೆ ತೊಂದರೆ ಕೊಡುತ್ತಿರುವ ಸಂಬಂಧ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ.</td></tr>
</table>

**ಇ–ಪಸಂಮೀ 109 ಸಲೆವಿ 2022**

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ ಸಚಿವರು